

ವೃದ್ಧರ ಸಮಸ್ಯೆಗೆ ಸ್ಪಂದಿಸಲು ಅನ್ವಯಾ ಚಾಯ್ ಪೆ ಚರ್ಚಾ

ಬೆಂಗಳೂರು: ಭಾರತದ ಮೊದಲ, ಏಕೈಕ ಐಒಟಿ ಮತ್ತು ಎಐ ತಂತ್ರಜ್ಞಾನ ಆಧಾರಿತ ವೃದ್ಧರ ವೇದಿಕೆಯಾಗಿರುವ ಅನ್ವಯಾ, ಹಿರಿಯರು ಎದುರಿಸುತ್ತಿರುವ ಅನೇಕ ಸಮಸ್ಯೆಗಳು ಮತ್ತು ಅವುಗಳ ಪರಿಹಾರಕ್ಕೆ ಸಂಬಂಧಿಸಿದಂತೆ ಚರ್ಚೆ ನಡೆಸಲು 'ಅನ್ವಯಾ ಚಾಯ್ ಪೆ ಚರ್ಚಾ' ಎಂಬ ವೇದಿಕೆ ಆರಂಭಿಸಿದೆ ಎಂದು ಸಂಸ್ಥೆಯ ಸಂಸ್ಥಾಪಕ, ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ರೆಡ್ಡಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಸುರಕ್ಷತೆ, ಸೂಕ್ತ ಆರೋಗ್ಯ, ಆರೈಕೆ ಮತ್ತು ಇತರ ಸೇವೆಗಳ ಕೊರತೆ, ಆರ್ಥಿಕ ಮತ್ತು ಕಾನೂನು ಅಡೆತಡೆಗಳು, ಏಕಾಂಗಿತನ ಮತ್ತು ಭಾವನಾತ್ಮಕವಾಗಿ ಕುಗ್ಗಿರುವುದು ಸೇರಿದಂತೆ ಇನ್ನಿತರ ಸಮಸ್ಯೆಗಳನ್ನು ಹಿರಿಯರು ಎದುರಿಸುತ್ತಿದ್ದಾರೆ. ಕುಟುಂಬದವರು ಅಗತ್ಯವಾಗಿ ಬೇಕಾಗಿರುವ ಎಲ್ಲ ಸೌಲಭ್ಯಗಳನ್ನು ಕಲ್ಪಿಸಿದರೂ ಅವರಿಗೆ ಭಾವನಾತ್ಮಕವಾಗಿ ಮತ್ತು ಸಮಯದ ಬೆಂಬಲ ಸಿಗುವುದಿಲ್ಲ. ಈ ಹಿನ್ನೆಲೆಯಲ್ಲಿ ಅವರ ಸಮಸ್ಯೆಗಳು ಮತ್ತು ಪರಿಹಾರದ ಕುರಿತು ಚರ್ಚಿಸಲು ಅನ್ವಯಾ ಚಾಯ್ ಪೇ ಚರ್ಚಾ ಏರ್ಪಡಿಸಲಾಗುತ್ತದೆ. ಹಿರಿಯರ ರಕ್ಷಣೆ ಕುರಿತು ಜನರಲ್ಲಿ ಜಾಗೃತಿ ಮೂಡಿಸಲೆಂದೇ ಹಿರಿಯರ ನಿಂದನೆ ಜಾಗೃತಿ ದಿನ ಆಚರಿಸಲಾಗುತ್ತದೆ. ಹೀಗಾಗಿ ಅನ್ವಯಾದಲ್ಲಿ ಭಾರತವನ್ನು ಹಿರಿಯ ಸ್ನೇಹಿ ಸಮುದಾಯವನ್ನಾಗಿ ಮಾಡುವ ಉದ್ದೇಶದಿಂದ ಕೆಲಸ ಮಾಡುತ್ತಿದ್ದೇವೆ ಎಂದು ತಿಳಿಸಿದರು.

ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ಕೇಂದ್ರದ ವನವಿಕಾಸ ಕಚೇರಿಯಲ್ಲಿ ನಿಗಮದ ಸುವರ್ಣ ಮಹೋತ್ಸವದ ಆಚರಣೆಯ ಅಂಗವಾಗಿ ಬುಧವಾರ ಆಯೋಜಿಸಿದ್ದ ರಕ್ತದಾನ ಶಿಬಿರಕ್ಕೆ ನಿಗಮದ ಅಧ್ಯಕ್ಷೆ ತಾರಾ ಅನುರಾಧ ಚಾಲನೆ ನೀಡಿದರು.

ರೋಗಿಗಳ ಸಹಾಯಕ್ಕಾಗಿ ಸಂಗೀತ ಸಂಜೆ ಆಯೋಜನೆ

ಬೆಂಗಳೂರು: ಬಡ ರೋಗಿಗಳಿಗೆ ಅತ್ಯುತ್ತಮ ಚಿಕಿತ್ಸೆ ನೀಡುವ ಉದ್ದೇಶದಿಂದ ಪ್ರಾರಂಭವಾಗಿರುವ ಟ್ರಸ್ಟ್ ವೆಲ್ ಫೌಂಡೇಶನ್ ವತಿಯಿಂದ ನಿಧಿ ಸಂಗ್ರಹಕ್ಕೆ ಜೂನ್ 26 ರಂದು ಸಂಗೀತ ಸಂಜೆ ಆಯೋಜಿಸಲಾಗಿದೆ. ಟ್ರಸ್ಟ್‌ವೆಲ್ ಆಸ್ಪತ್ರೆ ಕಳೆದ 2 ವರ್ಷಗಳಿಂದ 50 ಸಾವಿರಕ್ಕೂ ಹೆಚ್ಚು ರೋಗಿಗಳಿಗೆ ಚಿಕಿತ್ಸೆಯನ್ನು ನೀಡಿದೆ. 4500ಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಗಳನ್ನು ಯಶಸ್ವಿಯಾಗಿ ನೆರವೇರಿಸಿದ್ದು, ಕೋವಿಡ್ ಸಂದರ್ಭದಲ್ಲಿ ಅತಿ ಹೆಚ್ಚು ಬ್ಲ್ಯಾಕ್ ಫಂಗಸ್‌ಗೆ ಚಿಕಿತ್ಸೆ ನೀಡಿದೆ. ಆಸ್ಪತ್ರೆಗೆ ಬರುವ ಕೆಲ ಆರ್ಥಿಕ ದುರ್ಬಲ ರೋಗಿಗಳಿಗೆ ಹಣಕಾಸಿನ ಮುಗ್ಗಟ್ಟಿನಿಂದ ಚಿಕಿತ್ಸೆ ನೀಡಲು ಸಾಧ್ಯವಾಗುತ್ತಿರಲಿಲ್ಲ. ಈ ಹಿನ್ನೆಲೆಯಲ್ಲಿ ಬಡ ರೋಗಿಗಳಿಗೆ ಅತ್ಯುತ್ತಮ ಚಿಕಿತ್ಸೆ ದೊರಕಿಸಿಕೊಡಲು ಟ್ರಸ್ಟ್‌ವೆಲ್ ಫೌಂಡೇಶನ್ ಪ್ರಾರಂಭಿಸಲಾಗಿದೆ ಎಂದು ಟ್ರಸ್ಟ್‌ವೆಲ್ ಆಸ್ಪತ್ರೆಯ ನಿರ್ದೇಶಕರಾದ ಡಾ. ಎಚ್ .ವಿ.ಮಧುಸೂಧನ್ ತಿಳಿಸಿದರು. ಜೂನ್ 26, 2022 ರಂದು ಸಂಜೆ 6 ಗಂಟೆಗೆ ನಡೆಯಲಿರುವ ಸಂಗೀತ ಸಂಜೆ ಕಾರ್ಯಕ್ರಮದಲ್ಲಿ ಸಂಗೀತ ನಿರ್ದೇಶಕ ಗುರುಕಿರಣ್, ಹಿನ್ನಲೆ ಗಾಯಕ ರಾಜೇಶ್ ಕೃಷ್ಣನ್ ಮತ್ತು ಅನುರಾಧಾ ಭಟ್ ಭಾಗವಹಿಸಿ, ರಂಜಿಸಲಿದ್ದಾರೆ. ಕಾರ್ಯಕ್ರಮದ ಡೋನರ್ ಪಾಸ್‌ಗಳಿಗಾಗಿ https://www.trustwellhospitals.com/foundation/ ಭೇಟಿ ನೀಡಲು ಕೋರಿದೆ.

ಸಮಾಚಾರ ಸಣ್ಣದಲ್ಲ

ಬೈಕ್ ಕಳ್ಳನ ಬಂಧನ

ಬೆಂಗಳೂರು: ನಕಲಿ ಕೀ ಬಳಸಿ ಇಲ್ಲವೇ ಹ್ಯಾಂಡಲ್ ಲಾಕ್ ಮುರಿದು ಬೈಕ್‌ಗಳನ್ನು ಕಳವು ಮಾಡುತ್ತಿದ್ದ ಆರೋಪಿಯನ್ನು ಬ್ಯಾಡರಹಳ್ಳಿ ಪೊಲೀಸರು ಬಂಧಿಸಿದ್ದಾರೆ. ಬ್ಯಾಡರಹಳ್ಳಿಯ ವಿಷ್ಣು ಬಂಧಿತ ಆರೋಪಿ. ರಸ್ತೆ ಬದಿ ನಿಲ್ಲಿಸಿದ್ದ ವಾಹನ ಕಳ್ಳತನವಾಗಿರುವ ಬಗ್ಗೆ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ತನಿಖೆ ನಡೆಸಿದ ಪೊಲೀಸರು ಆರೋಪಿ ವಿಷ್ಣು ಎಂಬಾತನನ್ನು ಬಂಧಿಸಿದ್ದಾರೆ. ಆರೋಪಿಯಿಂದ ಎರಡೂವರೆ ಲಕ್ಷ ರು. ಮೌಲ್ಯದ 5 ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ.

ಲಾರಿ ಹರಿದು ಬೈಕ್ ಸವಾರ ಸ್ಥಳದಲ್ಲೇ ಸಾವು

ಬೆಂಗಳೂರು: ಲಾರಿ ಹರಿದು ಬೈಕ್ ಸವಾರ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಪೀಣ್ಯದ ಎನ್‌ಟಿಟಿಆರ್ ಸರ್ಕಲ್ ಬಳಿ ನಡೆದಿದೆ. ಸಿಜ್ಜು (49) ಮೃತ ದುರ್ದೈವಿ. ಸಿಜ್ಜು ತನ್ನ ಸ್ನೇಹಿತನ ಜತೆ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಲಾರಿ ಡಿಕ್ಕಿಯಾಗಿದ್ದು, ಇದರಿಂದ ಕೆಳಗೆ ಬಿದ್ದ ಅವರ ಮೇಲೆ ಲಾರಿ ಹರಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಿಂಬದಿ ಕುಳಿತಿದ್ದ ಸ್ನೇಹಿತನಿಗೆ ಗಾಯಗಳಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗಾಯಾಳುವಿನ ಪರಿಸ್ಥಿತಿಯೂ ಗಂಭೀರವಾಗಿ ಎಂದು ಪೊಲೀಸರು ತಿಳಿಸಿದ್ದಾರೆ. ಪೀಣ್ಯ ಸಂಚಾರ ವಿಭಾಗದ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಒಂದೇ ದಿನ 249 ನಿಯಮ ಉಲ್ಲಂಘನೆ

ಬೆಂಗಳೂರು: ಕಾಮಾಕ್ಷಿಪಾಳ್ಯ ಠಾಣೆಯ ಸಂಚಾರ ವಿಭಾಗದ ಪೊಲೀಸರ ಕಾರ್ಯಾಚರಣೆ ಕೈಗೊಂಡು ಒಂದೇ ದಿನ 249 ಸಂಚಾರ ನಿಯಮ ಉಲ್ಲಂಘನೆ ಪ್ರಕರಣ ದಾಖಲಿಸಿದ್ದಾರೆ. ಠಾಣೆಯ ಪಿಎಸ್‌ಐ ಶಿವಣ್ಣ ಎಂ. ನೇತೃತ್ವದ ಸಿಬ್ಬಂದಿ ಸಂಚಾರ ನಿಯಮ ಉಲ್ಲಂಘಿಸಿದವರ ವಿರುದ್ಧ ಒಂದೇ ದಿನ 249 ಪ್ರಕರಣ ದಾಖಲಿಸಿ ಒಟ್ಟು 2,04,000 ರು. ದಂಡ ವಸೂಲಿ ಮಾಡಿದ್ದಾರೆ. ಅದರಲ್ಲಿ 36ಕ್ಕೂ ಹೆಚ್ಚು ನೋ ಪಾರ್ಕಿಂಗ್ ಸ್ಥಳಗಳಲ್ಲಿ ವಾಹನ ನಿಲುಗಡೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ 36,500 ರು. ದಂಡ ವಸೂಲಿ ಮಾಡಿದ್ದಾರೆ.

ಅರ್ಚನಾ ಕಾಮತ್ ಅರ್ಜಿ ವಜಾ

ಬೆಂಗಳೂರು: 2022ನೇ ಸಾಲಿನ ಕಾಮನ್‌ವೆಲ್ತ್ ಕ್ರೀಡಾಕೂಟಕ್ಕೆ ಟೇಬಲ್ ಟೆನಿಸ್ ಮಹಿಳಾ ತಂಡಕ್ಕೆ ತಮ್ಮನ್ನು ಕೈಬಿಟ್ಟ ಟಿಟಿಎಫ್‌ಐ ಕ್ರಮ ಪ್ರಶ್ನಿಸಿ ಬೆಂಗಳೂರಿನ ಟೆನಿಸ್ ಆಟಗಾರ್ತಿ ಅರ್ಚನಾ ಕಾಮತ್ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ. ಜತೆಗೆ, ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳುವ ಟೇಬಲ್ ಟೆನಿಸ್ ಮಹಿಳಾ ಆಟಗಾರರ ತಂಡದ ಅಂತಿಮ ಆಯ್ಕೆ ಪಟ್ಟಿಯನ್ನು ಆಯೋಜಕರಿಗೆ ರವಾನಿಸದಂತೆ ಟಿಟಿಎಫ್‌ಐಗೆ ನಿರ್ದೇಶಿಸಿ ಜೂ.16ರಂದು ನೀಡಿದ್ದ ಮಧ್ಯಂತರ ಆದೇಶವನ್ನು ತೆರವುಗೊಳಿಸಿದೆ. ಈ ಕುರಿತು ತೀರ್ಪು ನೀಡಿದ ನ್ಯಾಯಮೂರ್ತಿ ಪಿ.ಎಸ್. ದಿನೇಶ್‌ಕುಮಾರ್ ನೇತೃತ್ವದ ವಿಭಾಗೀಯ ಪೀಠ, ಆಟಗಾರರ ಆಯ್ಕೆಗಾಗಿ ನಿವೃತ್ತ ಮುಖ್ಯ ನ್ಯಾಯಮೂರ್ತಿ ನೇತೃತ್ವದಲ್ಲಿ ರಚಿಸಿರುವ ಇಬ್ಬರು ತಜ್ಞರಿರುವ ಆಡಳಿತಗಾರರ ಸಮಿತಿ 2022ರ ಫೆಬ್ರವರಿ ಯಿಂದ ಕಾರ್ಯನಿರ್ವಹಿಸುತ್ತಿದೆ. ಆಟಗಾರರ ಆಯ್ಕೆ ವಿಚಾರ ತಜ್ಞರಿಗೆ ಬಿಟ್ಟಿರುವುದರಿಂದ ನ್ಯಾಯಾಲಯ ಮಧ್ಯಪ್ರವೇಶಿಸಲಾಗದು ಎಂದು ಹೇಳಿದೆ. ಅರ್ಜಿದಾರರ ಪರ ವಕೀಲರು ವಾದ ಮಂಡಿಸಿ, ಅರ್ಜಿದಾರರು ಶಿಲ್ಲಾಂಗ್‌ನಲ್ಲಿ ನಡೆದ ಕೂಟದಲ್ಲಿ ಕಳಪೆ ಸಾಧನೆ ಮಾಡಿದ್ದರು. ಹಾಗಾಗಿ ಅವರನ್ನು ತಂಡದಿಂದ ಕೈಬಿಡಲಾಗಿದೆ. ದೇಶೀಯ ಕ್ರೀಡಾಕೂಟಗಳ ಸಾಧನೆ ಆಧರಿಸಿ ಆಟಗಾರರ ಆಯ್ಕೆ ಮಾಡಲಾಗಿದೆ ಎಂದು ಟಿಟಿಎಫ್‌ಐ ವಕೀಲರು ಹೇಳಿದರು.

{ ಆರಗ ಜ್ಞಾನೇಂದ್ರ } ಗೃಹ ಸಚಿವ

ಮಹಾರಾಷ್ಟ್ರ ಚುನಾವಣೆಯಲ್ಲಿ ಬಿಜೆಪಿ, ಶಿವಸೇನೆ ಒಗ್ಗೂಡಿ ಸ್ಪರ್ಧಿಸಿದ್ದವು. ಚುನಾವಣೆಯಲ್ಲಿ ಗೆದ್ದ ನಂತರ ಎಂಟು ಪಕ್ಷಗಳ ತಂಡ ಮಾಡಿಕೊಂಡು ಬಿಜೆಪಿಯಿಂದ ದೂರಾಯಿತು. ಬಹಳ ದಿನ ಅವರ ಮೈತ್ರಿ ಇರಲ್ಲ ಅನಿಸಿತ್ತು. ಈಗ ಅದು ಆಗಿದೆ.

ವಿಶ್ವವಾಣಿ ಕ್ಲಬ್‌ಹೌಸ್‌ನಲ್ಲಿ ಅಧ್ಯಾತ್ಮ ಚಿಂತಕಿ, ಲೇಖಕಿ ವೀಣಾ ಬನ್ನಂಜೆ ಅವರಿಂದ ಉಪನ್ಯಾಸ

ಕಾಮ ವರ್ಜ್ಯವಲ್ಲ; ಭಗವಂತನ ಕಡೆಗೆ ಹೋಗುವ ದಾರಿ

ವಿಶ್ವವಾಣಿ ಕ್ಲಬ್‌ಹೌಸ್ ಬೆಂಗಳೂರು

ವಿಶ್ವವಾಣಿ
Clubhouse
ಸಂವಾದ-323

ಕಾಮವೆಂದರೆ ಕೇವಲ ದೈಹಿಕ ಸುಖವಲ್ಲ. ಅದರಲ್ಲಿ ದೈಹಿಕ, ಇಂದ್ರಿಯ, ಮಾನಸಿಕ ಹಾಗೂ ಭಗವತ್ ಕಾಮ ಎಲ್ಲವೂ ಇರುತ್ತದೆ. ಭಗವಂತನನ್ನು ಕಂಡುಕೊಳ್ಳುವುದಕ್ಕೆ ಕಾಮವೂ ಪ್ರಮುಖ ಪಾತ್ರ ವಹಿಸುತ್ತದೆ ಎಂದು ಅಧ್ಯಾತ್ಮ ಚಿಂತಕಿ, ಲೇಖಕಿ ವೀಣಾ ಬನ್ನಂಜೆ ಅಭಿಪ್ರಾಯಪಟ್ಟಿದ್ದಾರೆ.

ವಿಶ್ವವಾಣಿ ಕ್ಲಬ್‌ಹೌಸ್‌ನಲ್ಲಿ 'ಕಾಮ, ಬ್ರಹ್ಮಚರ್ಯ ಮತ್ತು ಅಧ್ಯಾತ್ಮ' ವಿಷಯದ ಅರಿವಿನ ಉಪನ್ಯಾಸ ನೀಡಿದ ಅವರು, ಕಾಮ ಮತ್ತು ಬ್ರಹ್ಮಚರ್ಯ ಅನೇಕರಿಗೆ ಕುತೂಹಲ. ಈ ಕುತೂಹಲ ಕೆಲವೊಮ್ಮೆ ಅಪಾಯವನ್ನು ತರುತ್ತದೆ. 'ಕಾಮ' ಎನ್ನುವುದನ್ನು ಕೇವಲ ದೈಹಿಕ ಕಾಮಕ್ಕೆ ಸೀಮಿತಗೊಳಿಸುವುದು ತಪ್ಪು. ಕಾಮ ಎಂದರೆ ಅಪೇಕ್ಷೆ. ಅದರಲ್ಲಿ ದೈಹಿಕ ಕಾಮವಿದೆ. ಆದರೆ, ಅದನ್ನು ಮೀರಿದ ಹಲವು ಅಪೇಕ್ಷೆಗಳೂ ಇರುತ್ತವೆ. ಮಾನಸಿಕ ಅಪೇಕ್ಷೆಯೂ ಇದೆ ಎನ್ನುವುದು ಅರ್ಥೈಸಿಕೊಳ್ಳಬೇಕು ಎಂದು ಹೇಳಿದರು.

ಹಾಗೇ ನೋಡಿದರೆ, ಹುಟ್ಟಿನಿಂದ ಸಾವಿನ ತನಕ ಕಾಮ ಇರುತ್ತದೆ. ನನಗೊಂದು ಚಪ್ಪಲಿ ಬೇಕು, ಅವನೇ ಬೇಕು, ಇವಳೇ ಬೇಕು ಎನ್ನುವುದು ಅಪೇಕ್ಷೆಯ ಭಾಗ. ಕೆಲವೊಮ್ಮೆ ಮಾನಸಿಕ ಅಪೇಕ್ಷೆಯಿಂದ ಆರಂಭವಾಗಿ ಅದು ದೈಹಿಕ ಅಪೇಕ್ಷೆಗೆ ತಿರುಗುತ್ತದೆ. ಆದರೆ, ಮಾನಸಿಕ ಹಾಗೂ ದೈಹಿಕ ಎರಡಲ್ಲಿ ಮೊದಲು ಯಾವುದು ಎನ್ನುವುದು ಬೇರೆಯ ವಿಷಯ. ಇಂದ್ರಿಯದ ಯಾವುದೇ ಅಪೇಕ್ಷೆ ಆಗಬಹುದು. ಇನ್ನು ಕೆಲವೊಮ್ಮೆ ನಾವು ನೋಡಿರದ ವಿಷಯಗಳ ಮೇಲೆಯೂ ಅಪೇಕ್ಷೆಗಳು ಇರುತ್ತದೆ. ಅದು ಭಗವತ್ ಕಾಮವಿರಬಹುದು ಎಂದರು.

ಭಗವಂತ ಬೇಕು ಎನ್ನುವುದು ಕಾಮದ ಭಾಗವೇ:

ಭಗವಂತ ಬೇಕು ಎನ್ನುವುದು ಸಹ ಕಾಮದ ಒಂದು ಭಾಗವೇ ಆಗಿರುತ್ತದೆ. ಆದರೆ, ಅದು ದೈಹಿಕ ಕಾಮವಲ್ಲ. ಕೆಲವರಿಗೆ ಹುಟ್ಟುತ್ತಿದ್ದಂತೆ ದೇವರ ಮೇಲೆ ಅಪೇಕ್ಷೆಯಿರುತ್ತದೆ. ಅದು ಜೀವ ಕಾಮ. ಆದರಿದು ಇಂದ್ರಿಯ ಕರ್ಮಗಳ ಆಕರ್ಷಣೆಯಾಗುವುದಿಲ್ಲ. ಆಂತರಂಗವಾಗಿ ಕಾಣುವ ಕಾಮ. ಅದನ್ನು 'ಅಭೀಕ್ಷೆ' ಎನ್ನುತ್ತಾರೆ. ಆದ್ದರಿಂದ ಕಾಮ ಇಲ್ಲದೆ ಏನೂ ನಡೆಯುವುದಿಲ್ಲ. ಭಗವಂತ ಬೇಕು ಎನ್ನುವುದು ದೈಹಿಕ ಕಾಮವಲ್ಲ. ಆದರೆ ಅದು ಅಲೌಖಿಕ ಅಪೇಕ್ಷೆಯಾಗಿರುತ್ತದೆ. ಕಾಮವಿಲ್ಲದೆ ಯಾರೂ ಬದುಕಲು ಸಾಧ್ಯವಿಲ್ಲ. ಅದೇ ಕಾರಣಕ್ಕೆ ಮಹಾಭಾರತದಲ್ಲಿ ಎಲ್ಲಕಿಂತ ದೊಡ್ಡದು ಯಾವುದು ಎಂದು ಕೃಷ್ಣ ಪ್ರಶ್ನಿಸಿದಾಗ, 'ಕಾಮ' ಎಂದು ಭೀಮಸೇನ ಉತ್ತರಿಸಿದ್ದ. ಅದನ್ನು ಕೃಷ್ಣ ಸಹ ಬೆಂಬಲಿಸಿದ್ದ ಎಂದು ಹೇಳಿದರು.

ಸೆಕ್ಸ್ ಎನ್ನುವುದು ಒಂದು ಆಸೆ

'ಕಾಮ' ಪದಕ್ಕೆ ಇರುವ ಮತ್ತೊಂದು ಅರ್ಥ ಸೆಕ್ಸ್. ಇದೊಂದು ಪ್ರಕೃತಿ ತತ್ವದಲ್ಲಿರುವ ಆಸೆ. ದೇಹಕ್ಕೆ ಕೆಲವು ಅವಶ್ಯಕತೆಗಳಿರುತ್ತವೆ. ಅದು ನೈಸರ್ಗಿಕವಾಗಿ ಇರುತ್ತವೆ. ಕೆಲವೊಮ್ಮೆ ನಮಗೆ ಅರಿವಿಲ್ಲದಂತೆ ಬೆತ್ತಲೆ ಚಿತ್ರ, ಬೆತ್ತಲೆ ಹೆಣ್ಣು ಅಥವಾ ಹೆಣ್ಣನ್ನು ಏಕಾಂತದಲ್ಲಿ ನೋಡಿದಾಗ ಕಾಮ ಎದುರಾಗುತ್ತದೆ. ಇದು ದೈಹಿಕ ಕಾಮ. ಇದು ನೈಸರ್ಗಿಕ. ಪ್ರತಿ ಮನುಷ್ಯನ ಹುಟ್ಟಿನ ಧ್ಯೇಯ ಇನ್ನೊಂದು ಜೀವವನ್ನು ಹುಟ್ಟಿಸಬೇಕಾದದ್ದು. ಅದು ಇರಲೇಬೇಕು. ಇದು ಪ್ರತಿಯೊಬ್ಬರಲ್ಲಿಯೂ ಇದೆ. ಆದರೆ, ಈ ಆಸೆ ಹೆಣ್ಣಿಗಿಂತ ಗಂಡಿನಲ್ಲಿ ಹೆಚ್ಚಿರುತ್ತದೆ. ಹೆಣ್ಣು ಕಾಮಕ್ಕಿಂತ ಮೊದಲು ಪ್ರೇಮವನ್ನು ಅಪೇಕ್ಷಿಸುತ್ತಾಳೆ ಎಂದರು.

ಇಂತಹ ಇಂದ್ರಿಯ ಕಾಮವನ್ನು ಪ್ರಜ್ಞಾವಸ್ಥೆಯಲ್ಲಿ ಹಿಡಿತದಲ್ಲಿಟ್ಟುಕೊಳ್ಳುವುದು ಸಾಮಾನ್ಯ. ಆದರೆ ನಿದ್ರೆಯಲ್ಲಿರುವಾಗ, ಕನಸಿನಲ್ಲಿ ಬರುವ ಇಂದ್ರಿಯ ಕಾಮವನ್ನು ನಿಯಂತ್ರಿಸುವುದು ಬಹುದೊಡ್ಡ ಸಾಧನೆ. ಅದಕ್ಕೆ ಶ್ರಮ ಬೇಕು. ಇದನ್ನು ದಾಟಿ ಮುನ್ನಡೆಯಬೇಕು ಎಂದರು.

ಭಗವಂತನ ಕಾಮವು ಇಂತಹ ಎಲ್ಲ ಕಾಮವನ್ನು ಕಿತ್ತೆಸೆಯುತ್ತದೆ. ಕನಸು, ನಿದ್ರೆಯಲ್ಲಿ ಇಂದ್ರಿಯ ಅಪೇಕ್ಷೆಯನ್ನು ದಾಟಿದ್ದೇವೆ ಎಂದು ಹೇಳಲು ಭಾರೀ ಪ್ರಯತ್ನ ಅಗತ್ಯ. ಅದನ್ನು ಕಲಿಯುವುದು ದೊಡ್ಡ ಸವಾಲು ಹಾಗೂ ಕೆಲಸ. ಇದು ಒಂದು ತಪಸ್ಸು. ಭಗವಂತನನ್ನು ಹುಡುಕುವಾಗ ಶೇ.100ರಷ್ಟು ಅವನಿಗೆ ಸಮರ್ಪಿಸಿಕೊಳ್ಳಬೇಕು. ಅವನ ಹೊರತಾಗಿ ಇನ್ನೊಂದು ನೆನಪಾದರೆ ಆಗ ಭಗವಂತನಿರುವುದಿಲ್ಲ ಎಂದು ಹೇಳಿದರು.

ಕಾಮಕ್ಕೆ ದಣಿವಾಗುತ್ತದೆ. ಆದರೆ ಪ್ರೇಮ ಎನ್ನುವುದು ಅವಿಶ್ರಾಂತ. ಆಗ ತಾನೆ ಹುಟ್ಟಿರುವ ಮಗುವನ್ನು ಪ್ರೀತಿಸುತ್ತೇವೆ. ಅಲ್ಲಿ ನಮಗೆ ಪ್ರೇಮವಿರುತ್ತದೆಯೇ ಹೊರತು ಕಾಮವಲ್ಲ. ಆದ್ದರಿಂದ ಅಧ್ಯಾತ್ಮ ಸಾಧಕರ ಹತ್ತಿರ ಹೋದರೆ, ಅವರು ನಮ್ಮನ್ನು ಪ್ರೀತಿಸುತ್ತಾರೆ ಎನ್ನಿಸುತ್ತದೆ. ಏಕೆಂದರೆ ಅವರು ಎಲ್ಲರಲ್ಲೂ ಭಗವಂತನ್ನು ಅನುಭವಿಸುತ್ತಾರೆ. ಈ ಭಾವ ಕನೆಕ್ಟ್ ಆದರೆ, ದೈಹಿಕ ಪ್ರಶ್ನೆ ಅನಗತ್ಯವಾಗುತ್ತದೆ ಎಂದು ವಿವರಿಸಿದರು.

ಭಾವ ಶುದ್ಧವಿದ್ದರೆ ನಷ್ಟವಾಗುವುದಿಲ್ಲ

ರಾಮಾಯಣದ ಸುಂದರಕಾಂಡದಲ್ಲಿ ಹನುಮಂತನ ಪ್ರಸಂಗ ಬರುತ್ತದೆ. ಅದರಲ್ಲಿ ರಾವಣನ ಅಂತಃಪುರಕ್ಕೆ ರಾತ್ರಿಯ ವೇಳೆ ಹೊಕ್ಕುತ್ತಾನೆ. ಆ ಸಮಯದಲ್ಲಿ ಹೆಣ್ಣು ಮಕ್ಕಳು ದುರಾವಸ್ಥೆಯಲ್ಲಿ ಇರುವುದನ್ನು, ನೋಡಬಾರದ ಅವಸ್ಥೆಯಲ್ಲಿ ನೋಡುತ್ತಾನೆ. ಅದರಲ್ಲಿ ನಗ್ನತೆ ಇರುತ್ತದೆ. ಈ ಬಗ್ಗೆ ಕೊಂಚ ಹೆಚ್ಚು ಅನಿಸುವ ವಿವರಣೆಯನ್ನು ವಾಲ್ಮೀಕಿ ನೀಡಿದ್ದಾರೆ. ಆದರೆ ಇದಾದ ಬಳಿಕ ಹನುಮಂತ ತಾನು ಧರ್ಮಚ್ಯುತಿ ಮಾಡಿದ್ದೇನೆಯೇ ಎನ್ನುವ ಗೊಂದಲಕ್ಕೆ ಬೀಳುತ್ತಾನೆ. ಆದರೆ, ಆತನ ನೋಟದಲ್ಲಿ ಭಾವ ಶುದ್ಧತೆ ಇದ್ದಿದ್ದರಿಂದ ಅದು ಧರ್ಮ ಚ್ಯುತಿಯಲ್ಲ. ಐಂದ್ರಿಕ ಪ್ರಚೋದನೆಯಿದ್ದರೆ ಶುದ್ಧ. ನೋಡದೇ ಇರುವು ದರಿಂದ, ನೋಡು ವುದರಿಂದ ನಷ್ಟವಾಗುವುದಿಲ್ಲ. ಆದರೆ, ನೋಟದ ಹಿಂದಿನ ಭಾವ ಮುಖ್ಯ. ಬ್ರಹ್ಮಚರ್ಯದ ಗಟ್ಟಿತನ ಮುಖ್ಯ ಎನ್ನುವುದನ್ನು ವಾಲ್ಮೀಕಿ ಮಹರ್ಷಿ ರಾಮಾಯಾಣದಲ್ಲಿ ಸೂಕ್ಷ್ಮವಾಗಿ ಹೇಳಿದ್ದಾರೆ ಎಂದು ವೀಣಾ ಬನ್ನಂಜೆ ವಿವರಿಸಿದರು.

ಸನ್ಯಾಸಿಗಳೊಂದಿಗೆ ಅಂತರವಿರಲಿ

ಭಾರತ ಪರಂಪರೆಯಲ್ಲಿ ಕೆಲವು ಮಠಾಧೀಶರು ಬ್ರಹ್ಮಚರ್ಯೆ ಯನ್ನು ಪಾಲಿಸಿಕೊಂಡು ಬರುತ್ತಿರುತ್ತಾರೆ. ಈ ಬ್ರಹ್ಮಚರ್ಯ ವನ್ನು ಪಾಲಿಸುವುದು ಬಹುದೊಡ್ಡ ಜವಾಬ್ದಾರಿಯಾಗಿರುತ್ತದೆ. ಏಕೆಂದರೆ ದೊಡ್ಡ ದೊಡ್ಡ ಮಠಾಧಿಪತಿಗಳು, ನಿತ್ಯ ಅನೇಕರನ್ನು ಭೇಟಿಯಾ ಗಬೇಕಾಗುತ್ತದೆ. ಆದ್ದರಿಂದ ಇಂತಹ ಮಠಾಧಿಪತಿಗಳು, ಬ್ರಹ್ಮಚರ್ಯ ಕಾಪಾಡಿಕೊಳ್ಳುವುದು ಎಷ್ಟು ಮುಖ್ಯವೋ, ಅದಕ್ಕೆ ಧಕ್ಕೆಯಾಗದಂತೆ ನೋಡಿಕೊಳ್ಳುವುದು ಸಹ ಅವರ ಶಿಷ್ಯಂದಿರ ಕರ್ತವ್ಯವಾಗಿರುತ್ತದೆ. ಆದ್ದರಿಂದ ಮಹಿಳೆಯರು ಮಠಾಧೀಶರನ್ನು ಏಕಾಂತದಲ್ಲಿ ಭೇಟಿಯಾಗಲು ಹೋಗಬಾರದು ಎಂದು ವೀಣಾ ಬನ್ನಂಜೆ ಸಲಹೆ ನೀಡಿದರು.

ಅರಿಷಡ್ವರ್ಗಕ್ಕೆ ಮೂಲವೇ ದೈಹಿಕ ಕಾಮ

ಅರಿಷಡ್ವರ್ಗವೆಂದು ಹೇಳಲಾಗುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ್ಯಗಳಿಗೆ ಮೂಲವೇ ಕಾಮ. ಶ್ರೀಕೃಷ್ಣ ಲೌಖಿಕ ಕಾಮದ ಬಗ್ಗೆ ಮೊದಲೇ ಎಚ್ಚರಿಕೆ ನೀಡಿದ್ದ. ದೈಹಿಕ ಕಾಮ ಸಿಗದಿದ್ದರೆ, ಲೌಖಿಕ ಕಾಮ ಸಿಗದಿದ್ದರೆ ಕೋಪ ಬರುತ್ತದೆ. ಕೋಪದಿಂದ ಕ್ರೋಧ ಹುಟ್ಟಿಸುತ್ತದೆ. ಕೋಪ ನಂತರದಲ್ಲಿ ಮೋಹ ಹೆಚ್ಚಿ, ಭ್ರಾಂತಿ ಹುಟ್ಟುತ್ತದೆ. ಕ್ರೋಧದಿಂದ ಮೋಹಕ್ಕೆ ತಿರುಗಿದರೆ ಅಧಃಪತನ ಆರಂಭ. ಆದ್ದರಿಂದ ಕಾಮವನ್ನು ಸಂಯಮಕ್ಕೆ ತಂದುಕೊಂಡರೆ ಈ ಐದು ವಿಷಯಗಳು ತಡೆಯಬಹುದು ಎಂದು ವೀಣಾ ಬನ್ನಂಜೆ ಹೇಳಿದರು.

ಗುರುವನ್ನು ನಾವು ಹುಡುಕುವುದಲ್ಲ

ಯಾವುದೇ ಕಾರಣಕ್ಕಾಗಿ ನಾವು ಯಾವುದೇ ಗುರು ವಿನ ಬಳಿ ಹೋಗಬೇಕಾದರೆ, ಅದು ನಮ್ಮ ಆಯ್ಕೆಯಾಗಬಾರದು. ಗುರುವಿಗೆ ಯಾರನ್ನು ತನ್ನ ಶಿಷ್ಯರನ್ನಾಗಿ ಮಾಡಿಕೊಳ್ಳಬೇಕು ಎನ್ನುವುದು ಗೊತ್ತು. ಅವರೇ ಆಯ್ಕೆ ಮಾಡುತ್ತಾರೆ. ಹಾಗೆ ಗುರುವಿನಿಂದ ಆಯ್ಕೆಯಾದವರನ್ನು, ಗುರುವು ತಾಯಿ ಯಂತೆ ಬೆಳೆಸುತ್ತಾನೆ. ನಿಜಗುರು ಸದಾ ಶಿಷ್ಯರನ್ನು ಸದಾ ಮಗುವಿನ ಹಾಗೆ ತಲೆ ಮೇಲೆ ಹೊತ್ತು ಬೆಳೆಸುತ್ತಾನೆ. ಇದು ನಿಜ ಗುರಿವಿನ ಸ್ಥಿತಿ ಎಂದು ವೀಣಾ ಬನ್ನಂಜೆ ವಿವರಿಸಿದರು.

ಅಧ್ಯಾತ್ಮದ ಹೆಸರಲ್ಲಿ ದಾರಿ ತಪ್ಪಿಸುವ ಕೆಲಸ

ಅಧ್ಯಾತ್ಮ, ಬ್ರಹ್ಮಚರ್ಯ ಎನ್ನುವುದು ಸರಳ ವಾಗಿ ಸಿಗುವ ವಿಷಯವಲ್ಲ. ಶ್ರೀಕೃಷ್ಣನ ಬ್ರಹ್ಮಚರ್ಯದ ಹೆಸರಲ್ಲಿ ಕೆಲವರು ಇತ್ತೀಚಿನ ದಿನದಲ್ಲಿ ಹೆಣ್ಣು ಮಕ್ಕಳನ್ನು ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಇದು ನಮ್ಮ ಮುಂದಿರುವ ವಾಸ್ತವ. ಅಧ್ಯಾತ್ಮದ ಹೆಸರಲ್ಲಿ ಯಾರೊಬ್ಬರೂ ಈ ರೀತಿ ಮಾಡಬಾರದು. ಇದು ಆ ವ್ಯಕ್ತಿತ ನಾಶ ಎಂದು ವೀಣಾ ಬನ್ನಂಜೆ ಹೇಳಿದರು.

- ಕಾಮಕ್ಕೆ ದಣಿವಿದೆ. ಪ್ರೇಮಕ್ಕೆ ದಣಿವಿಲ್ಲ.
- ಅಧ್ಯಾತ್ಮ ನೇರವಾಗಿ ಆಂತರಿಕ ಅನುಸಂಧಾನ. ಅದರಲ್ಲಿ ಎಂದಿಗೂ ಆಚರಣೆಯಿಲ್ಲ
- ಆಚರಣೆಗಳು ಬರುವುದು ಧರ್ಮದಲ್ಲಿ ಹೊರತು ಆಧ್ಯಾತ್ಮದಲ್ಲಲ್ಲ.
- ದಾಂಪತ್ಯದಲ್ಲಿದ್ದು, ಮಗುವಾದ ಬಳಿಕ ದೈಹಿಕವಾಗಿ ದೂರವಾದರೂ ಬ್ರಹ್ಮಚರ್ಯೆ
- ಅಧ್ಯಾತ್ಮದಲ್ಲಿ ನೇರವಾಗಿ ನನ್ನ ಆತ್ಮವನ್ನು ಹುಡುಕಿ, ಭಗವಂತನನ್ನು ಮುಖಾಮುಖಿ ಮಾಡುವುದು.
- ಇತ್ತೀಚಿನ ದಿನಗಳಲ್ಲಿ ಭಗವಂತನ ಮಾರ್ಗ ತೋರಿಸುವ ಹೆಸರಲ್ಲಿ ಹೆಣ್ಣುಮಕ್ಕಳಿಗೆ ವಂಚಿಸುವವರಿದ್ದಾರೆ
- ಬ್ರಹ್ಮಚರ್ಯ ಎನ್ನುವುದು ಬೆಂಕಿಯೊಂದಿಗಿನ ಬದುಕು. ಸಣ್ಣ ಕಿಡಿಯಿಂದಲೂ ಇಡೀ ವ್ಯವಸ್ಥೆ ಭಸ್ಮವಾಗುತ್ತದೆ.

ಪತ್ನಿ ಕೊಂದ ಆರೋಪಿ ಸೆರೆ

ಬೆಂಗಳೂರು: ಸಾಲದ ಭಾದೆಯಿಂದ ನೊಂದು ಆಕ್ರೋಶಗೊಂಡ ಟೈಲರ್ ಒಬ್ಬ ಪತ್ನಿಯನ್ನು ಮಾರಕಾಸ್ತ್ರಗಳಿಂದ ಇರಿದು ಕೊಲೆ ಮಾಡಿದ್ದಲ್ಲದೆ, ಪುತ್ರಿಯ ಮೇಲೂ ಹಲ್ಲೆ ನಡೆಸಿ ಹತ್ಯೆಗೆ ಯತ್ನಿಸಿದ ಪ್ರಕರಣ ಯಶವಂತಪುರದ ಮತ್ತಿಕೆರೆಯಲ್ಲಿ ಬುಧವಾರ ನಸುಕಿನಲ್ಲಿ ನಡೆದಿದೆ.

ಮತ್ತಿಕೆರೆಯಲ್ಲಿ ವಾಸವಾಗಿದ್ದ ಟೈಲರ್ ವೃತ್ತಿ ನಡೆಸುತ್ತಿದ್ದ ದಾನೇಂದ್ರ ರೆಡ್ಡಿ ಎಂಬಾತ ಪತ್ನಿ ಅನಸೂಯ (42) ಎಂಬುವರನ್ನು ಹತ್ಯೆಗೈದು ಬಳಿಕ 13 ವರ್ಷದ ಮಗಳನ್ನು ಕೊಲೆಮಾಡಲು ಯತ್ನಿಸಿದ್ದಾನೆ. ಬಳಿಕ ತಾನೇ ಪೊಲೀಸರಿಗೆ ಕರೆ ಮಾಡಿ ಕೊಲೆಯಾಗಿರುವ ಬಗ್ಗೆ ಮಾಹಿತಿ ನೀಡಿ ತಪ್ಪಿಸಿಕೊಳ್ಳಲು ಯತ್ನಿಸಿದ್ದಾನೆ. ಆದರೆ, ಪೊಲೀಸರು ಸ್ಥಳಕ್ಕೆ ಆಗಮಿಸಿ, ತಮ್ಮದೇ ಧಾಟಿಯಲ್ಲಿ ವಿಚಾರಣೆ ನಡೆಸಿದಾಗ ಕೊಲೆ ಮಾಡಿರುವ ಬಗ್ಗೆ ಬಾಯ್ಬಿಟ್ಟಿದ್ದ. ಕೂಡಲೇ ಪೊಲೀಸರು ಆತನನ್ನು ಬಂಧಿಸಿದರು ಎಂದು ಡಿಸಿಪಿ ವಿನಾಯಕ ಪಾಟೀಲ್ ತಿಳಿಸಿದ್ದಾರೆ.

ದಾನೇಂದ್ರ ರೆಡ್ಡಿ ಮತ್ತು ಅನುಸೂಯ ಮತ್ತಿಕೆರೆಯಲ್ಲಿ ಟೈಲರ್ ವೃತ್ತಿ ಮಾಡಿಕೊಂಡಿದ್ದು, ದಂಪತಿಗೆ 13 ವರ್ಷದ ಮಗಳಿದ್ದಾಳೆ. ಇತ್ತೀಚೆಗೆ ಸರಿಯಾಗಿ ಕೆಲಸ ಇಲ್ಲದ ಕಾರಣ ದಾನೇಂದ್ರ ಸಾಕಷ್ಟು ಸಾಲ ಮಾಡಿಕೊಂಡಿದ್ದ. ಸಾಲ ತೀರಿಸ ಲಾಗದೆ ಸಂಕಷ್ಟಕ್ಕೆ ಸಿಲುಕಿದ್ದ. ಇದರಿಂದ ಬೇಸತ್ತು ಪತ್ನಿ, ಮಗಳನ್ನು ಕೊಲೆಗೈದು ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗಿದ್ದ.

ಅದರಂತೆ ಬುಧವಾರ ಮುಂಜಾನೆ ಮೂರು ಗಂಟೆ ಸುಮಾರಿಗೆ ಮಲಗಿದ್ದ ಪತ್ನಿ ಅನುಸೂಯಾಳನ್ನು ಚಾಕು ಮತ್ತು ಮಾರಕಾಸ್ತ್ರಗಳಿಂದ ಇರಿದು ಕೊಲೆ ಮಾಡಿದ. ಈ ವೇಳೆ ಎಚ್ಚರಗೊಂಡು ಅಡ್ಡಬಂದ ಪುತ್ರಿಯ ಮೇಲೂ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದ. ಬಳಿಕ ತಾನೇ ಪೊಲೀಸರಿಗೆ ಕರೆ ಮಾಡಿ, ಕೊಲೆಯಾಗಿರುವ ಬಗ್ಗೆ ಮಾಹಿತಿ ನೀಡಿದ್ದ. ಘಟನಾ ಸ್ಥಳಕ್ಕೆ ಆಗಮಿಸಿದ ಯಶ 'ವಂತಪುರ ಪೊಲೀಸರು ಗಾಯಗೊಂಡು ಬಿದ್ದಿದ್ದ ಪುತ್ರಿಯನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ. ಬಳಿಕ ದಾನೇಂದ್ರ ರೆಡ್ಡಿಯನ್ನು ವಿಚಾರಣೆಗೊ ಳಪಡಿಸಿದಾಗ ಕೃತ್ಯದ ಬಗ್ಗೆ ಮಾಹಿತಿ ನೀಡಿದ್ದಾನೆ.

50 ರು.ಗೆ ಸ್ನೇಹಿತನ ಕೊಲೆ

ಬೆಂಗಳೂರು: ಸ್ನೇಹಿತರ ನಡುವೆ ಕೇವಲ 50 ರು.ಗೆ ಜಗಳ ನಡೆದು ಯುವಕನ ಕೊಲೆಯಲ್ಲಿ ಅಂತ್ಯವಾದ ಘಟನೆ ಬಸವೇಶ್ವರನಗರದ ಕುರುಬರಹಳ್ಳಿ ಸರ್ಕಲ್ ಬಳಿ ಮಂಗಳವಾರ ರಾತ್ರಿ ನಡೆದಿದೆ.

ಲಗ್ಗೆರೆಯ ಶಿವಮಾದು (24) ಕೊಲೆಯಾದವನು. ಕೃತ್ಯ ಎಸಗಿದ ಆತನ ಸ್ನೇಹಿತ ಶಾಂತಕುಮಾರ್ ಪರಾರಿಯಾಗಿದ್ದು, ಬಂಧನಕ್ಕೆ ತೀವ್ರ ಶೋಧ ನಡೆಸಲಾಗಿದೆ ಎಂದು ಡಿಸಿಪಿ ಡಾ. ಸಂಜೀವ್ ಪಾಟೀಲ್ ತಿಳಿಸಿದ್ದಾರೆ.

ಕೊಲೆಯಾದ ಶಿವಮಾದು ಮತ್ತು ಆರೋಪಿ ಶಾಂತಕುಮಾರ್ ಇಬ್ಬರೂ ಸ್ನೇಹಿತರಾಗಿದ್ದು, ಚಿಕ್ಕಂದಿನಿಂದ ಒಟ್ಟಿಗೆ ಆಡಿ ಬೆಳೆದವರು. ಕುರುಬರಹಳ್ಳಿ ಸರ್ಕಲ್ ಬಳಿಯಿಂದ ಕೆಲ ವರ್ಷಗಳ ಹಿಂದೆ ಲಗ್ಗೆರೆ ಬ್ರಿಡ್ಜ್ ಸಮೀಪ ಶಿಫ್ಟ್ ಆಗಿದ್ದರು. ಆದರೂ ಹಿಂದೆ ಇದ್ದ ಪ್ರದೇಶಕ್ಕೆ ಆಗಾಗ್ಗೆ ಬರುತ್ತಿದ್ದರು. ಶಾಂತಕುಮಾರ್ ಜೊಮ್ಯಾಟೋ ಡೆಲಿವರಿ ಬಾಯ್ ಆಗಿದ್ದರೆ, ಶಿವಮಾದು ಆಟೋ ಓಡಿಸುತ್ತಿದ್ದ. ಮಂಗಳವಾರ ಸ್ನೇಹಿತರಿಬ್ಬರೂ ಕುರುಬರಹಳ್ಳಿ ಸರ್ಕಲ್ ಬಳಿಯ ಮೈದಾನವೊಂದರಲ್ಲಿ ಕ್ರಿಕೆಟ್ ಆಡಲು ಹೋಗಿದ್ದು, ಆಟ ಮುಗಿದ ಬಳಿಕ ರಾತ್ರಿ 8.30ರ ವೇಳೆಗೆ ಪಕ್ಕದಲ್ಲೇ ಇದ್ದ ಸೈಬರ್ ಸೆಂಟರ್ ಒಂದಕ್ಕೆ ಹೋಗಿದ್ದರು. ಈ ವೇಳೆ ಶಾಂತಕುಮಾರ್ ಜೇಬಿನಿಂದ ಶಿವಮಾದು 50 ರು. ತೆಗೆದುಕೊಂಡಿದ್ದ. ಇದನ್ನು ಪ್ರಶ್ನಿಸಿದ ಶಾಂತಕುಮಾರ್, ಹಣ ವಾಪಸ್ ಮಾಡುವಂತೆ ಕೇಳಿದ್ದ. ಅದಕ್ಕೆ ಶಿವಮಾದು ಕೊಡುವುದಿಲ್ಲ ಏನೀಗ ಎಂದು ಸಲುಗೆಯಿಂದ ಪ್ರಶ್ನೆ ಮಾಡಿದ್ದ.

ತಮಾಷೆಯಾಗಿ ಆರಂಭವಾದ ಮಾತು ಕೊನೆಗೆ ಜಗಳಕ್ಕೆ ತಿರುಗಿದ್ದು, ಆ ವೇಳೆ ಶಾಂತಕುಮಾರ್ ತನ್ನ ಜೇಬಿನಲ್ಲಿದ್ದ ಚಾಕು ತೆಗೆದು ಶಿವಮಾದು ಎದೆಗೆ ಚುಚ್ಚಿ ಪರಾರಿಯಾಗಿದ್ದ. ತೀವ್ರ ರಕ್ತಸ್ರಾವದೊಂದಿಗೆ ಬಿದ್ದಿದ್ದ ಶಿವಮಾದುವನ್ನು ಇತರೆ ಸ್ನೈಹಿತರು ಸ್ಥಳೀಯ ಆಸ್ಪತ್ರೆಗೆ ಸೇರಿಸಿದರೂ ಚಿಕಿತ್ಸೆ ಫಲಿಸದೆ ಆತ ಸಾವನ್ನಪ್ಪಿದ್ದಾನೆ. ಘಟನಾ ಸ್ಥಳಕ್ಕೆ ಬಸವೇಶ್ವರ ನಗರ ಪೊಲೀಸರು ತೆರಳಿ ಪರಿಶೀಲನೆ ನಡೆಸಿ, ಪ್ರಕರಣ ದಾಖಲಿಸಿಕೊಂಡಿದ್ದಾರೆ. ಸುತ್ತಮುತ್ತಲಿನ ಸಿಸಿಟಿವಿ ದೃಶ್ಯ ಆಧರಿಸಿ ಆರೋಪಿ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

ಅಪರಾಧ ಸುದ್ದಿಗಳು

ತಡೆಗೋಡೆ ಕುಸಿದು ಕಾರ್ಮಿಕ ಸಾವು

ಬೆಂಗಳೂರು: ರಾಜಧಾನಿಯಲ್ಲಿ ಮಳೆಗೆ ಮತ್ತೊಂದು ಜೀವ ಬಲಿಯಾಗಿದೆ. ರಾತ್ರಿ ಸುರಿದ ಮಳೆಯಿಂದಾಗಿ ತಡೆಗೋಡೆ ಏಕಾಏಕಿ ಕುಸಿದು ವಸಂತ್ (30) ಎಂಬ ಕಾರ್ಮಿಕ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ಯಶವಂತಪುರ ಪೊಲೀಸ್ ಠಾಣೆ ವ್ಯಾಪ್ತಿಯ ಐಎಸ್‌ಎಸ್‌ಸಿ ಸಮೀಪ ಈ ದುರಂತ ಸಂಭವಿಸಿದೆ. ಐಐಎಸ್‌ಸಿ ಪಕ್ಕದ ರಸ್ತೆಯಲ್ಲಿ ಬಿಬಿಎಂಪಿ ವತಿಯಿಂದ ಒಳಚರಂಡಿ ಕಾಮಗಾರಿ ನಡೆಸಲಾಗುತ್ತಿದೆ. ವಸಂತ್ ಮತ್ತಿತರರು ಬುಧವಾರ ಮುಂಜಾನೆ ಮೂರು ಗಂಟೆ ಸಮಯದಲ್ಲಿ ಕಾಮಗಾರಿ ಮಾಡುತ್ತಿದ್ದರು. ಈ ಸಂದರ್ಭದಲ್ಲಿ ಐಐಎಸ್‌ಸಿ ಆವರಣದಲ್ಲಿರುವ ಭಾರಿ ಗಾತ್ರದ ಮರವೊಂದು ಕಾಂಪೌಂಡ್ ಮೇಲೆ ಉರುಳಿಬಿತ್ತು. ಮರ ಮತ್ತು ಕಾಂಪೌಂಡ್ ಗೋಡೆ ಕೆಲಸಗಾರರ ಮೇಲೆ ಬಿದ್ದ ಪರಿಣಾಮ ವಸಂತ್ ಸ್ಥಳದಲ್ಲೇ ಮೃತಪಟ್ಟಿದ್ದಾನೆ. ವಸಂತ್ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಎಂ.ಎಸ್.ರಾಮಯ್ಯ ಆಸ್ಪತ್ರೆಗೆ ರವಾನಿಸಿರುವ ಯಶವಂತಪುರ ಪೊಲೀಸರು ಮುಂದಿನ ಕ್ರಮ ಜರುಗಿಸಿದ್ದಾರೆ.

ಸಿಐಎಸ್‌ಎಫ್‌ನ 8 ಕಾನ್‌ಸ್ಟೇಬಲ್‌ಗಳನ್ನು ವಜಾಗೊಳಿಸಿದ್ದ ಆದೇಶ ಎತ್ತಿಹಿಡಿದ ಹೈ

ಸಹೋದ್ಯೋಗಿ ಪೇದೆ ಪತ್ನಿ ಮೇಲೆ ಅತ್ಯಾಚಾರ

ಬೆಂಗಳೂರು: ಸಹೋದ್ಯೋಗಿ ಕಾನ್‌ಸ್ಟೇಬಲ್ ಪತ್ನಿಯನ್ನು ಬ್ಲ್ಯಾಕ್‌ಮೇಲ್ ಮಾಡಿ, ಹಲವು ಬಾರಿ ಅತ್ಯಾಚಾರ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯ (ಸಿಐಎಸ್‌ಎಫ್) ಎಂಟು ಕಾನ್‌ಸ್ಟೇಬಲ್‌ಗಳನ್ನು ಸೇವೆಯಿಂದ ವಜಾಗೊಳಿಸಿರುವ ಶಿಸ್ತುಪಾಲನಾ ಸಮಿತಿಯ ಆದೇಶವನ್ನು ಹೈಕೋರ್ಟ್ ವಿಭಾಗೀಯ ಪೀಠ ಎತ್ತಿ ಹಿಡಿದಿದೆ.

ತಮ್ಮನ್ನು ಸೇವೆಯಿಂದ ವಜಾಗೊಳಿಸಿರುವ ಶಿಸ್ತುಪಾಲನಾ ಸಮಿತಿ ಆದೇಶ ಪ್ರಶ್ನಿಸಿ ವಿಕಾಸ್ ವರ್ಮಾ ಸೇರಿದಂತೆ ಮೈಸೂರಿನ ಭಾರತೀಯ ರಿಸರ್ವ್ ಬ್ಯಾಂಕ್ ಮುದ್ರಣ ಪ್ರೈವೇಟ್ ಲಿಮಿಟೆಡ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಎಂಟು ಮಂದಿ ಸಿಐಎಸ್‌ಎಫ್ ಕಾನ್‌ಸ್ಟೇಬಲ್‌ಗಳು ಸಲ್ಲಿಸಿದ್ದ ಮೇಲ್ಮನವಿ ಅರ್ಜಿ ವಜಾಗೊಳಿಸಿದ ನ್ಯಾಯಮೂರ್ತಿ ಅಲೋಕ್ ಅರಾಧೆ ನೇತೃತ್ವದ ವಿಭಾಗೀಯ ಪೀಠ, ಆರೋಪಿಗಳನ್ನು ಸೇವೆಯಿಂದ ವಜಾಗೊಳಿಸಿರುವ ಆದೇಶ ಸೂಕ್ತವಾಗಿದೆ ಎಂದು ಅಭಿಪ್ರಾಯಪಟ್ಟಿದೆ. ಮೇಲ್ಮನವಿದಾರರ ವಿರುದ್ಧ ಇರುವ ಆರೋಪ ಸಾಬೀತುಪಡಿಸಲು ಸಾಕಷ್ಟು ದಾಖಲೆಗಳಿವೆ. ಶಿಸ್ತುಪಾಲನಾ ಸಮಿತಿ ಈ ದಾಖಲೆಗಳನ್ನು ಆಧರಿಸಿ ಯೇ ಅವರನ್ನು ಸೇವೆಯಿಂದ ವಜಾಗೊಳಿಸಿದೆ.

ಅಲ್ಲದೆ, ಇದೊಂದು ಅಪರೂಪದಲ್ಲಿ ಅಪರೂಪದ ಪ್ರಕರಣ ಎಂದು ಹೇಳಿದ ನ್ಯಾಯಪೀಠ, ಈ ಕೃತ್ಯ ಸಿಐಎಸ್‌ಎಫ್ ಪಡೆಯ ಶಿಸ್ತು ಮತ್ತು ಸದಾಚಾರಕ್ಕೆ ವಿರುದ್ಧವಾಗಿದೆ. ಆದ್ದರಿಂದ ಆರೋಪಿಗಳನ್ನು ಸೇವೆಯಿಂದ ವಜಾಗೊಳಿಸಿರುವ ಆದೇಶ ಸಮಂಜಸವಾಗಿದೆ. ಅದರಲ್ಲಿ ಮಧ್ಯಪ್ರವೇಶಿಸುವ ಅಗತ್ಯವಿಲ್ಲ ಎಂದು ತೀರ್ಪಿನಲ್ಲಿ ಹೇಳಿದೆ.

ಏನಿದು ಪ್ರಕರಣ?

ಮೈಸೂರಿನ ಭಾರತೀಯ ರಿಸರ್ವ್ ಬ್ಯಾಂಕ್ ಮುದ್ರಣ ಪ್ರೈವೇಟ್ ಲಿಮಿಟೆಡ್‌ನಲ್ಲಿ ಸಿಐಎಸ್‌ಎಫ್ ಕಾನ್‌ಸ್ಟೇಬಲ್‌ಗಳಾಗಿದ್ದ ಎಂಟು ಮಂದಿಯ ಪೈಕಿ ವಿಕಾಸ್ ವರ್ಮಾ ತನ್ನ ಸಹೋದ್ಯೋಗಿ ಕಾನ್‌ಸ್ಟೇಬಲ್ ಒಬ್ಬರ ಪತ್ನಿಯನ್ನು ಪರಿಚಯಿಸಿಕೊಂಡು ಆಕೆಯೊಂದಿಗೆ ಮೊಬೈಲ್‌ನಲ್ಲಿ ಅಶ್ಲೀಲವಾಗಿ ಸಂಭಾಷಣೆ ಮಾಡುತ್ತಿದ್ದ. ತನ್ನೊಂದಿಗೆ ಲೈಂಗಿಕವಾಗಿ ಸಹಕರಿಸುವಂತೆ ಹೇಳಿದ್ದ. ಅಲ್ಲದೆ, ಆಕೆಯ ಮನೆ ಬಳಿ ಹೋಗಿ ಅತ್ಯಾಚಾರ ಎಸಗಿದ್ದ. ಬಳಿಕ ಇತರ ಸಹೋದ್ಯೋಗಿಗಳಾದ ಅಂಕುಶ್ ಪಿನಿಯಾ, ಪಿಂಕು ಕುಮಾರ್, ವಿ.ಕೆ.ತಿವಾರಿ, ಚಂದನ್ ಕುಮಾರ್, ರಾಹುಲ್ ದಿವಾಕರ್, ಜಿತೇಂದ್ರ, ಸಿಂಗ್ ಕೂಡ ಆಕೆಯನ್ನು ಬ್ಲ್ಯಾಕ್‌ಮೇಲ್ ಮಾಡಿ ಅತ್ಯಾಚಾರ ಎಸಗಿದ್ದರು. ಈ ಕೃತ್ಯವನ್ನು ಆಕೆ ಪತಿಗೆ ತಿಳಿಸಿದ್ದು, ಬಳಿಕ 2015ರ ಜು.2ರಂದು ಆಕೆ ಮೇಲಧಿಕಾರಿಗಳಿಗೆ ದೂರು ನೀಡಿದ್ದರು. ಪ್ರಕರಣದ ವಿಚಾರಣೆ ನಡೆಸಿದ ಶಿಸ್ತುಪಾಲನಾ ಸಮಿತಿ ಮತ್ತು ಮೇಲ್ಮನವಿ ಪ್ರಾಧಿಕಾರ, 2015ರ ಆ.2ರಂದು ಅತ್ಯಾಚಾರ ಎಸಗಿದ್ದ ಎಂಟು ಮಂದಿಯನ್ನು ಸೇವೆಯಿಂದ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಆರೋಪಿಗಳು ಹೈಕೋರ್ಟ್ ಮೆಟ್ಟಿಲೇರಿದ್ದರು. ಏಕಸದಸ್ಯ ಪೀಠ ಅರ್ಜಿ ವಜಾಗೊಳಿಸಿದ್ದರಿಂದ ವಿಭಾಗೀಯ ಪೀಠದಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

ಹೈಕೋರ್ಟ್ ಸುದ್ದಿಗಳು

ಅಸಲಿ ಬಿಲ್ ನೀಡದಿದ್ದಕ್ಕೆ ಪರಿಹಾರ ಕಡಿತ

ಬೆಂಗಳೂರು: ಅಪಘಾತ ಪ್ರಕರಣವೊಂದರಲ್ಲಿ ಗಾಯಾಳು ಮಹಿಳೆ ವೈದ್ಯಕೀಯ ಬಿಲ್‌ನ ಮೂಲ ಪ್ರತಿಗಳ ಜತೆಗೆ ಕಲರ್ ಜೆರಾಕ್ಸ್ ಬಿಲ್ ಪ್ರತಿಗಳನ್ನು ನೀಡಿದ ಹಿನ್ನೆಲೆಯಲ್ಲಿ ವಿಮಾ ಪರಿಹಾರದ ಮೊತ್ತವನ್ನು ಕಡಿತಗೊಳಿಸಿ ಹೈಕೋರ್ಟ್ ಆದೇಶಿಸಿದೆ.

ಅಪಘಾತ ಪ್ರಕರಣವೊಂದರಲ್ಲಿ ಮಹಿಳೆಗೆ 5.98 ಲಕ್ಷ ರು. ಪರಿಹಾರ ನಿಗದಿಪಡಿಸಿದ್ದ ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಾಧಿಕರಣದ (ಎಂಎಸಿಟಿ) ಆದೇಶ ಪ್ರಶ್ನಿಸಿ ಓರಿಯೆಂಟಲ್ ವಿಮಾ ಕಂಪನಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜೆ.ಎಂ.ಖಾಜಿ ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ. ಅಲ್ಲದೆ, ಅಪಘಾತ ಪ್ರಕರಣಗಳಲ್ಲಿ ಪರಿಹಾರ ಕೋರಿ ಅರ್ಜಿ ಸಲ್ಲಿಸಿದಾಗ, ಅದರೊಂದಿಗೆ ಒದಗಿಸುವ ಪ್ರತಿಯೊಂದು ವೈದ್ಯಕೀಯ ಬಿಲ್‌ನ ನೈಜತೆ ಪರಿಶೀಲಿಸುವುದು ಎಂಎಸಿಟಿಯ ಕರ್ತವ್ಯ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಅಪಘಾತ ಪ್ರಕರಣದಲ್ಲಿ ಗಾಯಾಳು ಮಹಿಳೆ ವೈದ್ಯಕೀಯ ಚಿಕಿತ್ಸೆ ಪಡೆದಿರುವ ಬಗ್ಗೆ ಸಲ್ಲಿಸಿರುವ ಬಿಲ್‌ಗಳಲ್ಲಿ ಕೆಲವು ಕಲರ್ ಜೆರಾಕ್ಸ್ ಪ್ರತಿಗಳಿವೆ. ಇವುಗಳ ಅಸಲಿ ಬಿಲ್ ನೀಡದೇ ಇರುವ ಬಗ್ಗೆ ಮಹಿಳೆ ಕಾರಣ ನೀಡಿಲ್ಲ. ಈ ಜೆರಾಕ್ಸ್ ಬಿಲ್‌ಗಳನ್ನು ಆಧರಿಸಿ ನ್ಯಾಯಾಧಿಕರಣ 2.26 ಲಕ್ಷ ರು. ಪರಿಹಾರ ನಿಗದಿಪಡಿಸಿದೆ. ಮಹಿಳೆ ಸಲ್ಲಿಸಿರುವ 154 ಬಿಲ್‌ಗಳಲ್ಲಿ 79 ಬಿಲ್‌ಗಳು ಮಾತ್ರ ಅಸಲಿಯಾಗಿವೆ. ಉಳಿದವು ಬಿಲ್‌ಗಳ ನಕಲು ಪ್ರತಿಯಾಗಿವೆ. ನ್ಯಾಯಾಧೀ ಕರಣವನ್ನು ದಿಕ್ಕು ತಪ್ಪಿಸುವ ಉದ್ದೇಶದಿಂದ ಮಹಿಳೆ ಬಿಲ್‌ಗಳನ್ನು ಕ್ರಮಬದ್ಧವಾಗಿ ನೀಡಿಲ್ಲ. ಇಂತಹ ಸಂದರ್ಭದಲ್ಲಿ ಬಿಲ್‌ಗಳ ನೈಜತೆಯನ್ನು ಸೂಕ್ಷ್ಮವಾಗಿ ಗಮನಿಸುವಲ್ಲಿ ನ್ಯಾಯಾಧೀಕರಣ ವಿಫಲವಾಗಿದೆ. ಪ್ರತಿಯೊಂದು ವೈದ್ಯಕೀಯ ಬಿಲ್‌ನ ನೈಜತೆ ಪರಿಶೀಲಿಸುವುದು ನ್ಯಾಯಧೀಕರಣದ ಕರ್ತವ್ಯವಾಗಿದೆ ಎಂದು ಹೈಕೋರ್ಟ್ ಹೇಳಿತು. ಅಂತಿಮವಾಗಿ ಪರಿಹಾರದ ಮೊತ್ತವನ್ನು 5.98 ಲಕ್ಷ ರು.ನಿಂದ 2,89,540 ರು. ಗೆ ಇಳಿಸಿ ಆದೇಶಿಸಿತು.2016ರಲ್ಲಿ ಕಲಬುರಗಿಯಲ್ಲಿ ಮಹಿಳೆಯೊಬ್ಬರು ಬೈಕ್‌ನಿಂದ ಬಿದ್ದು ಗಾಯಗೊಂಡಿದ್ದರು. ಇವರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿತ್ತು. ದ್ವಿಚಕ್ರವಾಹನಕ್ಕೆ ವಿಮೆಯಿದ್ದ ಕಾರಣ ಅದರ ಮಾಲೀಕರು ಪರಿಹಾರಕ್ಕಾಗಿ ನ್ಯಾಯಾಧೀಕರಣಕ್ಕೆ ಕ್ಲೇಮು ಸಲ್ಲಿಸಿದ್ದರು.